# ರಾಷ್ಟ್ರೀಯ ಸೇವಾಯೋಜನೆಯ ದೈನಂದಿನ ಚಟುವಟಿಕೆಗಳ ವಾರ್ಷಿಕ ವರದಿ 2024–25 (01.04.2024 ರಿಂದ 31.03.2025 ರ ವರೆಗೆ )

## ವಾರ್ಷಿಕ ಚಟುವಟಿಕೆಗಳ ಪಕ್ಷಿನೋಟ

ಇಂದಿನ ಯುವ ಪೀಳಿಗೆ ಹುಚ್ಚೆದ್ದು ಕುಣಿದು ಕುಪ್ಪಳಿಸಿ ದಾರಿ ತಪ್ಪಿ ದಿಕ್ಕು ದೆಸೆ ಇಲ್ಲದಂತೆ ನಡೆಯುತ್ತಿರುವ ವಿದ್ಯಾರ್ಥಿಗಳಿಗೆ ಜಾತಿ, ಮತ, ಪಂಥಗಳ ವಿಷಯದಲ್ಲಿ ಭ್ರಾತೃತ್ವದ ಪುಷ್ಪ ಅರಳಿಸಿ ಗ್ರಾಮೀಣ ಬದುಕಿನೆಡೆಗೆ ತಂದು ಗ್ರಾಮೀಣ ಜೀವನವನ್ನು ಹಸನುಗೊಳಿಸಿ ಸಮಾಜ ಸುಧಾರಣೆಯ ಜೊತೆಗೆ ವ್ಯಕ್ತಿತ್ವ ವಿಕಸನಕ್ಕೆ ದಾರಿಮಾಡಿಕೊಡುವ ರಾಷ್ಟ್ರೀಯ ಸೇವಾ ಯೋಜನೆಯ ಘಟಕವನ್ನು ನಮ್ಮ ಮಹಾವಿದ್ಯಾಲಯವು ಒಳಗೊಂಡಿದ್ದು, ಇದಕ್ಕೊಂದು ಯೋಜನಾಬದ್ಧ ದಿಕ್ಕು ದೆಸೆ ತೋರಿಸಲು ಒಂದು ಸಲಹಾ ಸಮಿತಿಯನ್ನು ರಚಿಸಲಾಗಿದೆ. ನಮ್ಮ ಎನ್.ಎಸ್.ಎಸ್ ಘಟಕವು ನಿಗದಿತ **100** ಸ್ವಯಂ ಸೇವಕರನ್ನು ನೊಂದಣಿ ಮಾಡಿಕೊಂಡಿರುತ್ತದೆ. ಈ ಸ್ವಯಂ ಸೇವಕರು ವಿವಿಧ ರೀತಿಯ ದೈಹಿಕ ಪರಿಶ್ರಮದ ಜೊತೆಗೆ ನಾಯಕತ್ವ ತರಬೇತಿ, ಸ್ವಚ್ಛತಾ ಶಿಬಿರಗಳು, ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ಸಕ್ರಿಯವಾಗಿ ತೊಡಗಿಸಿಕೊಂಡು ಅನೇಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಮಹಾವಿದ್ಯಾಲಯದ ಕೀರ್ತಿಯನ್ನು ಮೆರೆದಿದ್ದಾರೆ.

## ದೈನಂದಿನ ಚಟುವಟಿಕೆಗಳ ಉದ್ಘಾಟನೆ

**ದಿನಾಂಕ 17–10–2024**ರಂದು ವಿದ್ಯುಕ್ತವಾಗಿ ನಮ್ಮ ಎನ್.ಎಸ್.ಎಸ್ ಘಟಕದ ದೈನಂದಿನ ಚಟುವಟಿಕೆಗಳ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯರಾದ ಶ್ರೀ.ಎಸ್.ಎ.ತಿಪ್ಪೇಶ್‌ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪ್ರೊ.ಎಂ.ಜಿ.ಬಂಡಿವಡ್ಡರ್ ಹಾಗೂ ಡಾ.ಕೆ.ವಿ ಜಯಪ್ಪ ಅವರು ಆಗಮಿಸಿ ವಿದ್ಯಾರ್ಥಿಗಳಿಗೆ ಎನ್.ಎಸ್.ಎಸ್ ಧ್ಯೇಯೋದ್ದೇಶಗಳನ್ನು ತಿಳಿಸುತ್ತ ಎನ್.ಎಸ್.ಎಸ್‌ನ ಮಹತ್ವವನ್ನು ಮನವರಿಕೆ ಮಾಡಿಕೊಟ್ಟರು.

## ವಿಶ್ವಪರಿಸರ ದಿನಾಚರಣೆ

ಮಹಾಂತಸ್ವಾಮಿ ಕಲಾ ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಹಂಸಭಾವಿಯಲ್ಲಿ ದಿನಾಂಕ:05.06.2024ರಂದು ಎನ್.ಎಸ್.ಎಸ್ ಘಟಕದ ವತಿಯಿಂದ ವಿಶ್ವ ಪರಿಸರ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಉಪ ಪ್ರಾಚಾರ್ಯರಾದ ಶ್ರೀ.ಎಮ್.ಜಿ.ಬಂಡಿವಡ್ಡರ ಅವರಿಂದ ಮಹಾವಿದ್ಯಾಲಯದ ಆವರಣದಲ್ಲಿ ಸಸಿಯೊಂದನ್ನು ನೆಡುವುದರ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು. ಎನ್.ಎಸ್.ಎಸ್ ಕಾರ್ಯಕ್ರಮ ಅಧಿಕಾರಿಗಳಾದ ಡಾ.ರಾಜಕುಮಾರ ಎಸ್.ಸಾವಳಗಿಯವರು ಸ್ವಯಂ ಸೇವಕರೊಂದಿಗೆ ಆವರಣದಲ್ಲಿ ಸಸಿಗಳನ್ನು ನೆಟ್ಟರು. ಈ ಸಂದರ್ಭದಲ್ಲಿ ಭೂಗೋಳಶಾಸ್ತ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಎಸ್.ಎಸ್.ಮಠಪತಿಯವರು ಐಕ್ಯೂಎಸಿ

ಸಂಯೋಜಕರಾದ ಡಾ.ಮಲ್ಲಿಕಾರ್ಜುನ್ ಕುಂಬಾರ ಹಾಗೂ ಇತರ ವಿಷಯಗಳ ಪ್ರಾಧ್ಯಾಪಕರು, ಎನ್.ಎಸ್.ಎಸ್ ಸ್ವಯಂಸೇವಕರು ಉಪಸ್ಥಿತರಿದ್ದರು.

**ಅಂತರಾಷ್ಟ್ರೀಯ ಯೋಗ ದಿನಾಚರಣೆ–2024**

ಮಹಾಂತಸ್ವಾಮಿ ಕಲಾ ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಹಂಸಭಾವಿಯಲ್ಲಿ ದಿನಾಂಕ:21.06.2024 ರಂದು ಮಹಾವಿದ್ಯಾಲಯದ ಎನ್.ಎಸ್.ಎಸ್, ಎನ್.ಸಿ.ಸಿ ಹಾಗೂ ಯೂಥ ರೆಡ ಕ್ರಾಸ್ ಘಟಕ ಮತ್ತು ಮೃತ್ಯುಂಜಯ ವಿದ್ಯಾಪೀಠದ ಅಂಗ ಸಂಸ್ಥೆಗಳ ಸಹಯೋಗದಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಯೋಗ ತರಬೇತುದಾರರಾಗಿ ಶೀಮತಿ.ತೇಜಶ್ವಿನಿ ಕೆರೂಡಿಯವರು ಆಗಮಿಸಿ ಮಾರ್ಗದರ್ಶನ ನೀಡಿದರು. ಮಹಾವಿದ್ಯಾಲಯದ ಪ್ರಾಚಾರ್ಯರಾದ ಪ್ರೊ.ಎಸ್.ಎ.ತಿಪ್ಪೇಶ್, ಉಪಪ್ರಾಚಾರ್ಯರಾದ ಶ್ರೀ.ಎಮ್.ಜಿ.ಬಂಡಿವಡ್ಡರ, ಎನ್.ಎಸ್.ಎಸ್ ಕಾರ್ಯಕ್ರಮ ಅಧಿಕಾರಿಗಳಾದ ಡಾ.ರಾಜಕುಮಾರ ಎಸ್.ಸಾವಳಗಿ ಹಾಗೂ ಮಹಾವಿದ್ಯಾಲಯದ ಎಲ್ಲಾ ಪ್ರಾಧ್ಯಾಪಕರು, ಕಚೇರಿ ಸಿಬ್ಬಂದಿ, ಸ್ವಯಂಸೇವಕರು ಎಲ್ಲ ಅಂಗಸಂಸ್ಥೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

**ಸ್ವಾತಂತ್ರ್ಯ ದಿನಾಚರಣೆ–2023**

ದಿನಾಂಕ 15.08.2024ರಂದು ಬೆಳಗ್ಗೆ 8.30ಕ್ಕೆ ಮಹವಿದ್ಯಾಲಯದ ಆವಣದಲ್ಲಿ 77ನೇ ಭಾರತ ಸ್ವಾತಂತ್ರ್ಯ ದಿನಾಚರಣೆಯನ್ನು ಹಮ್ಮಿಕ್ಕೊಳ್ಳಲಾಗಿತ್ತು. ಪದವಿ ಮಹಾವಿದ್ಯಾಲಯದ ಪ್ರಾಚಾರ್ಯರಾದ ಶ್ರೀ.ಎಸ್.ಎ.ತಿಪ್ಪೇಶ್ ಅವರು ಧ್ವಜಾರೋಹಣವನ್ನು ನೆರವೇರಿಸಿ ಇಂದಿನ ಯುವಜನತೆ ದೇಶ ಪ್ರೇಮ ದೇಶಾಭಿಮಾನವನ್ನು ಬೆಳೆಸಿಕೊಳ್ಳುವುದರ ಜೊತೆಗೆ ದೇಶದ ಸ್ವಾತಂತ್ರಕ್ಕಾಗಿ ಹೋರಾಡಿದ ದೇಶಭಕ್ತ ವೀರರ ಚರಿತೆಯನ್ನು ಅರಿತುಕೊಂಡು ಅವರ ಬದುಕಿನ ಮೌಲ್ಯಗಳನ್ನು ತಮ್ಮ ಜೀವನದಲ್ಲು ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಪದವಿ ಹಾಗೂ ಪದವಿ ಪೂರ್ವ ಮಹಾವಿದ್ಯಾಲಯದ ಎಲ್ಲ ಭೋದಕ ಭೋದಕೇತರ ಸಿಬ್ಬಂದಿ ವರ್ಗದವರು ವಿದ್ಯಾರ್ಥಿ/ನಿಯರು, ಎನ್.ಎಸ್.ಎಸ್ ಸ್ವಯಂ ಸೇವಕರು, ಎನ್.ಸಿ.ಸಿ ಕೆಡೆಟಗಳು, ರೋವರ್ ಮತ್ತು ರೇಂಜರ್ಸ್ ಘಟಕದ ವಿದ್ಯಾರ್ಥಿಗಳು ಹಾಜರಿದ್ದರು

## ಸ್ವಚ್ಛತಾ ಹಿ ಸೇವಾ –2024ರ ವರದಿ

**(17.09.2024 ರಿಂದ 02.10.2024)**

ಮಹಾಂತ ಸ್ವಾಮಿ ಕಲಾ ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಹಂಸಭಾವಿಯಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಘಟಕದ ವತಿಯಿಂದ **ಸ್ವಚ್ಛತಾ ಹಿ ಸೇವಾ** ಕಾರ್ಯಕ್ರಮದ ಅಡಿಯಲ್ಲಿ ಸೆಪ್ಟಂಬರ್ 23 ರಿಂದ ಅಕ್ಟೋಬರ್ 2ರ ವರೆಗೆ ವಿವಿಧ ಕಾರ್ಯಕ್ರಮಗಳನ್ನು ಹಾಗೂ ವಿಶೇಷವಾಗಿ ಶ್ರಮದಾನ ತರಗತಿಗಳನ್ನು ಹಮ್ಮಿಕೊಂಡು ಸ್ವಚ್ಛತೆಯ ಬಗೆಗೆ ಅರಿವನ್ನು ಮೂಡಿಸುವ ಕಾರ್ಯ ನಿರ್ವಹಿಸಲಾಯಿತು. ಅವುಗಳ ವಿವರ ಈ ಮುಂದಿನಂತಿದೆ.

## ಮಹಾವಿದ್ಯಾಲಯದ ಆವರಣದಲ್ಲಿ ಶ್ರಮದಾನ

ದಿನಾಂಕ 23.09.2024ರಂದು ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಗಳಾದ ಡಾ. ರಾಜಕುಮಾರ.ಎಸ್.ಸಾವಳಗಿಯವರ ನೇತೃತ್ವದಲ್ಲಿ ಮಹಾವಿದ್ಯಾಲಯದ ಆವರಣದಲ್ಲಿ ಸ್ವಯಂ ಸೇವಕರಿಂದ **ಸ್ವಚ್ಛತಾ ಹಿ ಸೇವಾ** ಅಭಿಯಾನದ ಅಡಿಯಲ್ಲಿ ವಿಶೇಷ ಶ್ರಮದಾನ ತರಗತಿಯನ್ನು ಹಮ್ಮಿಕೊಂಡು , ಸ್ವಚ್ಛತಾ ಕಾರ್ಯವನ್ನು ನಿರ್ವಹಿಸಲಾಯಿತು.

## ಎನ್.ಎಸ್.ಎಸ್ ದಿನಾಚರಣೆ

ಮಹಾಂತಸ್ವಾಮಿ ಕಲಾ ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಹಂಸಭಾವಿಯ ಎನ್.ಎಸ್.ಎಸ್ ಘಟಕದ ವತಿಯಿಂದ ಎನ್.ಎಸ್.ಎಸ್ ದಿನಾಚರಣೆಯನ್ನು ದಿನಾಂಕ 24.09.2024 ರಂದು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ ಅರ್ಥಶಾಸ್ತ್ರದ ಸಹಾಯಕ ಪ್ರಾಧ್ಯಾಪಕರಾದ ಡಾ. ಸಂತೋಷ್ ಸಿ ಅವರು ಸ್ವಯಂ ಸೇವಕರಿಗೆ ಎನ್.ಎಸ್.ಎಸ್‌ನ ಧ್ಯೇಯ ಉದ್ದೇಶಗಳನ್ನ ಮನವರಿಕೆ ಮಾಡಿಕೊಟ್ಟರು. ದೇಶ ಸೇವೆಗೆ ಹಾಗೂ ವ್ಯಕ್ತಿತ್ವ ವಿಕಸನ ಮಾಡಿಕೊಳ್ಳುವುದಕ್ಕೆ ಎನ್.ಎಸ್.ಎಸ್ ಒಂದು ಉತ್ತಮ ಅವಕಾಶವಾಗಿದ್ದು, ಅದನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯರಾದ ಪ್ರೊ. ಎಸ್. ಎ ತಿಪ್ಪೇಶ್ ಅವರು ವಿದ್ಯಾರ್ಥಿಗಳು ಎನ್.ಎಸ್.ಎಸ್ ಸೇರಿ ಸಮಾಜ ಸೇವೆ ಆ ಮೂಲಕ ದೇಶ ಸೇವೆಗೆ ತಮ್ಮನ್ನು ಸನ್ನದಗೊಳಿಸಿಕೊಳ್ಳಬೇಕೆಂದು ಕರೆ ನೀಡಿದರು. ಎನ್.ಎಸ್.ಎಸ್ ಅಧಿಕಾರಿಗಳಾದ ಡಾ. ರಾಜಕುಮಾರ್ ಸಾವಳಗಿ ಅವರು ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ನೆರವೇರಿಸಿದರು. ಮಹಾವಿದ್ಯಾಲಯದ ಎಲ್ಲಾ ಸಿಬ್ಬಂದಿ ವರ್ಗ ವಿದ್ಯಾರ್ಥಿ ವಿದ್ಯಾರ್ಥಿನಿಯರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು, ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ಕ್ಯಾಪ್‌ಗಳ ವಿತರಣೆ ಹಾಗೂ ಶ್ರಮದಾನ

ದಿನಾಂಕ 27.09.2024ರಂದು ಮಹಾಂತಸ್ವಾಮಿ ಕಲಾ ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಹಂಸಭಾವಿಯಲ್ಲಿ ಎನ್.ಎಸ್.ಎಸ್ ಘಟಕದ ವತಿಯಿಂದ ಸ್ವಚ್ಛತಾ ಹಿ ಸೇವಾ ಯೋಜನೆ ಅಡಿಯಲ್ಲಿ ಸ್ವಯಂಸೇವಕರಿಗೆ ಕ್ಯಾಪುಗಳನ್ನು ವಿತರಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಮಹಾವಿದ್ಯಾಲಯದ ಪ್ರಾಚಾರ್ಯರಾದ ಶ್ರೀ.ಎಸ್.ಎ. ತಿಪ್ಪೇಶ್ ಅವರು ಸ್ವಯಂಸೇವಕರಿಗೆ **ಮೈ ಭಾರತ ಲೋಗೋ** ಇರುವ ಕ್ಯಾಪ್‌ಗಳನ್ನು ಹಾಗೂ ಇತರ ವಿತರಣೆ ಮಾಡಿದರು. ಪ್ರಾಚಾರ್ಯರ ಜೊತೆಗೆ ಉಪ ಪ್ರಾಂಶುಪಾಲರಾದ ಪ್ರೊ. ಎಂ.ಜಿ ಬಂಡಿವಡ್ಡರ್, ಡಾ.ಸಂತೋಷ್ ಸಿ, ಡಾ. ಬಸವ್ವ ಹಮ್ಮಿಣಿ ಹಾಗೂ ಎನ್.ಎಸ್.ಎಸ್ ಕಾರ್ಯಕ್ರಮ ಅಧಿಕಾರಿಗಳಾದ ಡಾ. ರಾಜಕುಮಾರ್ ಎಸ್. ಸಾವಳಗಿಯವರು ಕ್ಯಾಪುಗಳನ್ನು ಸ್ವಯಂಸೇವಕರಿಗೆ ವಿತರಿಸಿದರು. ಸ್ವಚ್ಛತಾ ಹಿ ಸೇವಾ ಆಂದೋಲನದ ಕಿಟ್‌ಗಳನ್ನು ಸ್ವೀಕರಿಸಿದ ಸ್ವಯಂ ಸೇವಕರು ಮಹಾವಿದ್ಯಾಲಯದ ಆವರಣದಲ್ಲಿ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸಿದರು.

## ದತ್ತು ಗ್ರಾಮದ ಸರಕಾರಿ ಕನ್ನಡ ಶಾಲಾ ಆವರಣದಲ್ಲಿ ಸ್ವಚ್ಛತಾ ಕಾರ್ಯ

ದಿನಾಂಕ 30.09.2024ರಂದು **ಮಹಾವಿದ್ಯಾಲಯದ ದತ್ತು ಗ್ರಾಮವಾದ ಮತ್ತಿಹಳ್ಳಿಯ ಕನ್ನಡ ಶಾಲಾ ಆವರಣವನ್ನು** ಸ್ವಚ್ಛಗೊಳಿಸುವ ಕಾರ್ಯವನ್ನು ಎನ್.ಎಸ್.ಎಸ್ ಘಟಕದ ಸ್ವಯಂ ಸೇವಕರಿಂದ ಹಮ್ಮಿಕೊಳ್ಳಲಾಗಿತ್ತು. ಸುಮಾರು ಮೂವತ್ತು ಜನ ಸ್ವಯಂ ಸೇವಕರು ನಿರಂತರ ಎರಡು ಗಂಟೆಗಳ ಕಾಲ ಶಾಲಾ ಆವರಣವನ್ನು ಸ್ವಚ್ಛಗೊಳಿಸಿದರು. ಸ್ವಚ್ಛತಾ ಕಾರ್ಯದ ನಂತರ ಅದೆ ಆವರಣದಲ್ಲಿ ಬೇವಿನ ಸಸಿಗಳನ್ನು ನೆಡಲಾಯಿತು. ಈ ಸಂದರ್ಭದಲ್ಲಿ ಶಾಲಾ ಮುಖ್ಯೋಪಾದ್ಯಾಯರು ಸಹಶಿಕ್ಷಕರು ಹಾಗೂ ಮಹಾವಿದ್ಯಾಲಯದ ಭೂಗೋಳಶಾಸ್ತ್ರದ ಸಹಾಯಕ ಪ್ರಾದ್ಯಾಪಕರಾದ ಡಾ.ಎಸ್.ಎಸ್ ಮಠಪತಿಯವರು ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಗಳಾದ ಡಾ.ರಾಜಕುಮಾರ ಎಸ್. ಸಾವಳಗಿಯವರು ಸ್ವಯಂಸೇವಕರಿಗೆ ಮಾರ್ಗದರ್ಶನ ಮಾಡಿದರು.

## ಗಾಂಧೀಜಿ ಜಯಂತಿ ಹಾಗೂ ಪಿ.ಎಚ್.ಸಿ ಆವರಣದಲ್ಲಿ ಸ್ವಚ್ಛತಾ ಕಾರ್ಯ

**ಸ್ವಚ್ಛತಾ ಹಿ ಸೇವಾ ಯೋಜನೆಯ ಅಡಿಯಲ್ಲಿ** ಮಹವಿದ್ಯಾಲಯದಲ್ಲಿ ಮಹಾತ್ಮಾ ಗಾಂಧೀಜಿಯವರ ಜಯಂತಿಯನ್ನು ವಿಶೇಷವಾಗಿ ಅಚರಿಸಲಾಯಿತು. ಮಹಾವಿದ್ಯಾಲಯದ ಹೊಸ ಸೆಮಿನಾರ ಹಾಲ್‌ನಲ್ಲಿ ಮಹಾತ್ಮಾ ಗಾಂಧೀಜಿ, ಲಾಲ ಬಹಾದ್ದೂರ ಶಾಸ್ತ್ರೀ ಹಾಗೂ ಡಾ. ಬಿ. ಅರ್. ಅಂಬೇಡ್ಕರ್ ಅವರ ಭಾವಚಿತ್ರಗಳಿಗೆ ಪೂಜೆಯನ್ನು ಸಲ್ಲಿಸಲಾಯಿತು. ಈ ಕಾರ್ಯಕ್ರಮದಲ್ಲಿ ರಾಜ್ಯಶಾಸ್ತ್ರದ ಸಹ ಪ್ರಾಧ್ಯಾಪಕರಾದ ಡಾ. ವ್ಹಾ. ಕೆ. ವಿರೂಪಾಕ್ಷಪ್ಪ  ಮುಖ್ಯ ಅತಿಥಿಗಳಾಗಿ ಮಾತನಾಡುತ್ತ, ಮಾಹಾತ್ಮಾ ಗಾಂಧೀಜಿಯವರ ಸಾಮಾಜಿಕ ಕಾಳಜಿ, ಸರಳ ಜೀವನ , ಸತ್ಯ, ಅಹಿಂಸೆಗಳ ಪರಿಣಾಮಕಾರಿ ಬಳಕೆ, ಸ್ವಾತಂತ್ರ್ಯ ಹೋರಾಟದಲ್ಲಿ ಅವರ ವಿಶಿಷ್ಟ ಪಾತ್ರದ ಕುರಿತು ಉಪನ್ಯಾಸ ನೀಡಿದರು. ಇನ್ನೋರ್ವ ಮುಖ್ಯತಿಥಿಗಳಾದ ಡಾ. ಎಂ. ಎಂ. ಅಕ್ಕಿಯವರು  ಮಹಾತ್ಮಾ ಗಾಂಧೀಜಿಯವರಿಗು  ಹಾವೇರಿಗೂ  ಇರುವ ಬಾಂಧವ್ಯವನ್ನು ಚಾರಿತ್ರಿಕ ಘಟನೆಗಳ ಹಿನ್ನೆಲೆಯಲ್ಲಿ ವಿವರಿಸಿ ಸ್ಥಳೀಯ ಇತಿಹಾಸದ ಮೇಲೆ ಬೆಳಕು ಚೆಲ್ಲಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯರಾದ ಶ್ರೀ.ಎಸ್.ಎ.ತಿಪ್ಪೇಶ್ ಅವರು ಮಹಾತ್ಮಾ ಗಾಂಧೀಜಿ, ಲಾಲ ಬಹಾದ್ದೂರ ಶಾಸ್ತ್ರೀ ಹಾಗೂ ಡಾ. ಬಿ. ಅರ್. ಅಂಬೇಡ್ಕರ್ ಅವರ ಆದರ್ಶಗಳನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಂಡು ಅವರ ಕನಸಿನ ಭಾರತವನ್ನು ಕಟ್ಟಲು ಶ್ರಮಿಸಬೇಕೆಂದು ಕರೆ ನೀಡಿದರು ಎನ್.ಎಸ್.ಎಸ್.ಕಾರ್ಯಕ್ರಮಾಧಿಕಾರಿ ಡಾ. ರಾಜಕುಮಾರ.ಎಸ್. ಸಾವಳಗಿಯವರು ಕಾರ್ಯಕ್ರಮವನ್ನು ನಿರೂಪಿಸಿ ವಂದನಾರ್ಪಣೆಯನ್ನು ನೆರವೇರಿಸಿದರು.

ಈ ವೇದಿಕೆಯ ಕಾರ್ಯಕ್ರಮ ಮುಗಿದ ನಂತರ ಮಹಾವಿದ್ಯಾಲಯದ  ಪ್ರಾಚಾರ್ಯರನ್ನು ಒಳಗೊಂಡಂತೆ ಸಮಸ್ತ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳಿಂದ ಹಂಸಭಾವಿಯ ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಸುಮಾರು ಎರಡು ಗಂಟೆಗಳ ಕಾಲ ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳಲಾಯಿತು. ಈ ಸಂದರ್ಭದಲ್ಲಿ ವೈದ್ಯಾಧಿಕಾರಿಗಳಾದ ಡಾ. ಚೇತನಕುಮಾರ ಹಾಗು ಆಸ್ಪತ್ರೆಯ ಇರತ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಹೀಗೆ ಸ್ವಚ್ಛತಾ ಹಿ ಸೇವಾ ಅಂದೋಲನವನ್ನು ಮಹಾವಿದ್ಯಾಲಯದ ಎನ್.ಎಸ್.ಎಸ್ ಘಟಕದ ವತಿಯಿಂದ ಅರ್ಥಪೂರ್ಣವಾಗಿ ಆಚರಿಸಲಯಿತು. ಸಹಕರಿಸಿದ ಎಲ್ಲರಿಗೂ ಅನಂತ ಅನಂತ ಧನ್ಯವಾದಗಳು.

## ರಕ್ತದಾನ ಶಿಬಿರ

ಮಹಾಂತಸ್ವಾಮಿ ಕಲಾ ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಹಂಸಭಾವಿಯಲ್ಲಿ ದಿನಾಂಕ: 25.11.2024 ರಂದು ಮಹಾವಿದ್ಯಾಲಯದ ಎನ್.ಎಸ್.ಎಸ್, ಎನ್.ಸಿ.ಸಿ ಹಾಗೂ ಯೂಥ ರೆಡ ಕ್ರಾಸ್ ಘಟಕಗಳ ಸಹಯೋಗದಲ್ಲಿ ರಕ್ತದಾನ ಶಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಎನ್.ಎಸ್.ಎಸ್ ಸ್ವಯಂಸೇವಕರು ಎನ್.ಸಿ.ಸಿ ಕೆಡೆಟಗಳು ಹಾಗೂ ಅಧ್ಯಾಪಕರು ಸ್ವಯಂ ಪ್ರೇರಣೆಯಿಂದ ಪಾಲ್ಗೊಂಡು ರಕ್ತದಾನವನ್ನು ಮಾಡಿದರು. ಹಾವೇರಿಯ ಜಿಲ್ಲಾ ಆಸ್ಪತ್ರೆಯ ರಕ್ತ ನಿಧಿ ಘಟಕದ ವೈದ್ಯರಾದ ಡಾ. ಬಸವರಾಜ್ ಹಾಗೂ ತಂಡದವರು 34 ಯುನಿಟ ರಕ್ತವನ್ನು ಸಂಗ್ರಹಿಸಿ ಸುರಕ್ಷಿತವಾಗಿ ತೆಗೆದುಕೊಂಡು ಹೋದರು. ಈ ಸಂದರ್ಭದಲ್ಲಿ ಮಹಾವಿದ್ಯಾಲಯದ ಎಲ್ಲ ಅಧ್ಯಾಪಕ ವೃಂದದವರು ಕಚೇರಿ ಸಿಬ್ಬಂದಿ, ವಿದ್ಯಾರ್ಥಿ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

## ಗಣರಾಜ್ಯೋತ್ಸವ ಕಾರ್ಯಕ್ರಮ–2025

ದಿನಾಂಕ 26.01.2025 ರಂದು ಬೆಳಗ್ಗೆ 8.30ಕ್ಕೆ ಮಹವಿದ್ಯಾಲಯದ ಆವಣದಲ್ಲಿ 75ನೇ ಭಾರತ ಗಣರಾಜೋತ್ಸವ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಪದವಿ ಮಹಾವಿದ್ಯಾಲಯದ ಪ್ರಾಚಾರ್ಯರಾದ ಶ್ರೀ.ಎಸ್.ಎ.ತಿಪ್ಪೇಶ್ ಅವರು ಧ್ವಜಾರೋಹಣವನ್ನು ನೆರವೇರಿಸಿ ಮಾತನಾಡುತ್ತ, ಭಾರತ ಪ್ರಪಂಚದಲ್ಲಿಯೇ

ಶಾಸಕಾಂಗ ನ್ಯಾಯಾಂಗ ಹಾಗೂ ಕಾರ್ಯಾಂಗದ ಮೇಲೆ ಇದೆಯೋ ಅಷ್ಟೇ ಇಂದಿ ಯುವಕರ ಮೇಲೂ ಇದೆ. ಆದ್ದರಿಂದ ಯುವ ಜನತೆ ನಮ್ಮ ನಾಡು–ನುಡಿ ಸಂಸ್ಕೃತಿ–ಇತಿಹಾಸಗಳ ಬಗೆಗೆ ಹೆಚ್ಚು ಹೆಚ್ಚು ತಿಳುವಳಿಕೆ ಬೆಳೆಸಿಕೊಳ್ಳುತ್ತ ಅಪ್ಪಟ ರಾಷ್ಟ್ರಭಕ್ತಿಯನ್ನು ಮೆರೆಯಬೇಕೆಂದು ಕರೆ ನೀಡಿದರು.ಕಾರ್ಯಕ್ರಮದಲ್ಲಿ ಪದವಿ ಹಾಗೂ ಪದವಿ ಪೂರ್ವ ಮಹಾವಿದ್ಯಾಲಯದ ಎಲ್ಲ ಭೋದಕ ಭೋದಕೇತರ ಸಿಬ್ಬಂದಿ ವರ್ಗದವರು ವಿದ್ಯಾರ್ಥಿ/ನಿಯರು, ಎನ್.ಎಸ್.ಎಸ್ ಸ್ವಯಂ ಸೇವಕರು, ಎನ್.ಸಿ.ಸಿ ಕೆಡೆಟಗಳು, ರೋವರ್ ಮತ್ತು ರೇಂಜರ್ಸ್ ಘಟಕದ ವಿದ್ಯಾರ್ಥಿಗಳು ಹಾಜರಿದ್ದರು.

N. S. S. Officer
M.A.S.C. College
Hansabhavi

Co-Ordinator
Internal Quality Assurance Cell
M.A.S.C. College, Haunsbhavi

PRINCIPAL
M.V.P'S Mahantswamy Arts, Science &
Commerce College, HAUNSBHAVI-581109
Tq: Hirekerur Dist: Haveri

## ದೈನಂದಿನ ಶ್ರಮದಾನ ಚಟುವಟಿಕೆ













## ವಿಶ್ವ ಪರಿಸರ ದಿನಾಚರಣೆ–2024












# ಸ್ವಾತಂತ್ರ್ಯ ದಿನಾಚರಣೆ–2024













## ಗಣರಾಜ್ಯೋತ್ಸವ–2025

















# ಎನ್.ಎಸ್.ಎಸ್. ದಿನಾಚರಣೆ
















# ಗಾಂಧಿ ಜಯಂತಿ




Latitude: 14.565518
Longitude: 75.361686
Elevation: 644.25±13 m
Accuracy: 5.1 m
Time: 02-10-2024 08:49
Note: GANDHI JAYANTI CELEBRATION
Powered by NoteCam


Latitude: 14.565494
Longitude: 75.361674
Elevation: 644.25±14 m
Accuracy: 5.0 m
Time: 02-10-2024 09:03
Note: GANDHI JAYANTI CELEBRATION
Powered by NoteCam


Latitude: 14.565492
Longitude: 75.361667
Elevation: 644.25±15 m
Accuracy: 4.8 m
Time: 02-10-2024 09:11
Note: GANDHI JAYANTI CELEBRATION
Powered by NoteCam


Latitude: 14.565491
Longitude: 75.361671
Elevation: 644.25±21 m
Accuracy: 5.7 m
Time: 02-10-2024 09:12
Note: GANDHI JAYANTI CELEBRATION
Powered by NoteCam


Latitude: 14.567328
Longitude: 75.362086
Elevation: 642.64±8 m
Accuracy: 8.1 m
Time: 02-10-2024 09:59
Note: GANDHI JAYANTI CELEBRATION


Latitude: 14.56733
Longitude: 75.362117
Elevation: 642.64±6 m
Accuracy: 4.1 m
Time: 02-10-2024 10:00
Note: GANDHI JAYANTI CELEBRATION



ದತ್ತುಗ್ರಾಮ ಮತ್ತಿಹಳ್ಳಿಯ ಶಾಲಾ ಆವರಣ ಸ್ವಚ್ಛತೆ ಹಾಗೂ ಸಸಿ ನೆಡುವ ಕಾರ್ಯಕ್ರಮ






















Latitude: 14.565562
Longitude: 75.361827
Elevation: 644.35±17 m
Accuracy: 9.7 m
Time: 09-23-2024 13:47
Note: nss swachhata hi seva-2024
Powered by NoteCam


Latitude: 14.565555
Longitude: 75.361852
Elevation: 644.35±17 m
Accuracy: 4.7 m
Time: 09-23-2024 13:44
Note: nss swachhata hi seva-2024
Powered by NoteCam


Latitude: 14.565591
Longitude: 75.361846
Elevation: 644.35±17 m
Accuracy: 7.1 m
Time: 09-23-2024 13:48
Note: nss swachhata hi seva-2024
Powered by NoteCam


Latitude: 14.565562
Longitude: 75.361857
Elevation: 644.35±17 m
Accuracy: 4.9 m
Time: 09-23-2024 13:41
Note: nss swachhata hi seva-2024
Powered by NoteCam


Latitude: 14.565723
Longitude: 75.361829
Elevation: 644.35±26 m
Accuracy: 8.4 m
Time: 09-23-2024 14:18
Note: nss swachhata hi seva-2024
Powered by NoteCam


Latitude: 14.565565
Longitude: 75.361856
Elevation: 644.35±16 m
Accuracy: 4.7 m
Time: 09-23-2024 13:40
Note: nss swachhata hi seva-2024
Powered by NoteCam


Latitude: 14.565567
Longitude: 75.361865
Elevation: 644.35±16 m
Accuracy: 3.7 m
Time: 09-23-2024 13:40
Note: nss swachhata hi seva-2024
Powered by NoteCam


Latitude: 14.565558
Longitude: 75.361853
Elevation: 644.35±17 m
Accuracy: 3.9 m
Time: 09-23-2024 13:44
Note: nss swachhata hi seva-2024
Powered by NoteCam

# ಸ್ವಯಂ ಸೇವಕರಿಂದ ಆರೋಗ್ಯ ಕೇಂದ್ರ ಸ್ವಚ್ಛತೆ



ಹಂಸಭಾವಿ: ಮಹಾಂತಸ್ವಾಮಿ ಕಲಾ, ವಿಜ್ಞಾನ ವಾಣಿಜ್ಯ ಮಹಾವಿದ್ಯಾಲಯದ ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣ ಸ್ವಚ್ಛಗೊಳಿಸಿದರು.

■ ಉದಯವಾಣಿ ಸಮಾಚಾರ

**ಹಂಸಭಾವಿ:** ಮೃತ್ಯುಂಜಯ ವಿದ್ಯಾಪೀಠದ ಮಹಂತಸ್ವಾಮಿ ಕಲಾ ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕರು 'ಸ್ವಚ್ಛತಾ ಹಿ ಸೇವಾ' ಯೋಜನೆ ಯಡಿಯಲ್ಲಿ ಮಹಾವಿದ್ಯಾಲಯದಲ್ಲಿ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜಯಂತಿಯನ್ನು ಆಚರಿಸಿ ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರ ಆವರಣವನ್ನು ಸ್ವಚ್ಛಗೊಳಿಸಿದರು.

ಈ ಸಂದರ್ಭದಲ್ಲಿ ವೈದ್ಯಾಧಿಕಾರಿ ಡಾ। ಚೇತನ್ ಕುಮಾರ್ ಹಾಗೂ ಮಹಾವಿದ್ಯಾಲಯದ ಪ್ರಾಚಾರ್ಯ ಎಸ್.ಎ. ತಿಪ್ಪೇಶ್, ಎನ್‌ಎಸ್‌ಎಸ್ ಅಧಿಕಾರಿ ಡಾ। ರಾಜಕುಮಾರ್ ಸಾವಳಗಿ, ಡಾ। ಎಂ.ಎಂ.ಅಕ್ಕಿ ಡಾ। ವಿಜಯಕುಮಾರ್ ಧಾನೇನವರ್, ವೈ.ಕೆ.ವಿರೂಪಾಕ್ಷಪ್ಪ ಪ್ರೊ। ಎಂ.ಜಿ. ಬಂಡಿವಡ್ಡರ ಹಾಗೂ ಇತರ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



ಹಂಸಬಾವಿಯ ಮೃತ್ಯುಂಜಯ ವಿದ್ಯಾಪೀಠದ ಮಹಾಂತಸ್ವಾಮಿ ಪದವಿ ಕಾಲೇಜಿನಲ್ಲಿ ಬುಧವಾರ ಗಾಂಧಿ ಜಯಂತಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಆಚರಿಸಲಾಯಿತು

03/10/2024 PV